**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿ: 1903/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | | ವಿರೂಪಾಕ್ಷ | ಪ್ರಾ.ಸಾ: 5 |
| ತಂದೆಯ/ಗಂಡನ ಹೆಸರು | | ಲೇಟ್ ಲಿಂಗಣ್ಣ | ಚಾಸಾ: 5 |
| ವಯಸ್ಸು | | 53 | |
| ಕೆಲಸ | | ವ್ಯವಸಾಯ | ಸಾ ಪ್ರ ಬೋ |
| ವಾಸ | | ಕಾರ್ಯ ಗ್ರಾಮ | ದಿ: 24.04.2024 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿತರು ನಮ್ಮ ಗ್ರಾಮದವರಾಗಿರುತ್ತಾರೆ. ಚಾಸಾ 1 ರಿಂದ 4, 6 ರಿಂದ 10 ನಮ್ಮ ಗ್ರಾಮಸ್ಥರಾಗಿರುತ್ತಾರೆ .

2. ಚಾಸಾ 1 ರಿಂದ 3 ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿರುವುದಿಲ್ಲ. ನಾನು ಸದರಿ ಗಲಾಟೆಯನ್ನು ನೋಡಿಲ್ಲ. ನನಗೆ ಸದರಿ ಗಲಾಟೆಯ ಕುರಿತು ಯಾವುದೇ ಮಾಹಿತಿ ಇಲ್ಲ. ಗಲಾಟೆಯ ಕುರಿತು ನಾನು ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿರುವುದಿಲ್ಲ.

3. ನನಗೆ ಈಗ ಮಹಜರಿನಲ್ಲಿರುವ ನನ್ನ ಸಹಿಯನ್ನು ತೋರಿಸಿದ್ದು , ಸ್ಥಳ ಮಹಜರನ್ನು ನಿಪಿ-2 ಎಂದು, ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸುಮಾರು 10 ವರ್ಷಗಳ ಹಿಂದೆ ಠಾಣೆಯಲ್ಲಿ ಪೋಲೀಸರ ಕೋರಿಕೆಯ ಮೇರೆಗೆ ನಿಪಿ-2 ಕ್ಕೆ ನನ್ನ ಸಹಿಯನ್ನು ಮಾಡಿರುತ್ತೇನೆ. ನಿಪಿ-2 ರ ಪಂಚನಾಮೆಯ ಮೂಲಕ ಪೋಲೀಸರು ನನ್ನ ಸಮಕ್ಷಮದಲ್ಲಿ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನನಗೆ ನಿಪಿ-2 ರಲ್ಲಿ ಬರೆದ ವಿಚಾರಗಳು ಗೊತ್ತಿರುವುದಿಲ್ಲ.

( ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾನೆ. ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು )

<u>**ಪಾಟೀ ಸವಾಲುಃ ಶ್ರೀ ಎಪಿಪಿ ಯವರಿಂದಃ**</u>

4. ದಿನಾಂಕ 10.08.2014 ರಂದು ಸಂಜೆ 06.00 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಬಳಿ 1 ನೇ ಆರೋಪಿತರು ಚಾಸಾ 1 ರವರ ಮನೆಗೆ ಹೋಗುವ ರಸ್ತೆಗೆ ಅಡ್ಡಲಾಗಿ ಎತ್ತಿನಗಾಡಿಯನ್ನು ನಿಲ್ಲಿಸಿದ್ದ ಬಗ್ಗೆ ಚಾಸಾ 1 ರವರಿಗೆ ಕೇಳಿದ್ದಕ್ಕೆ 1 ನೇ ಆರೋಪಿ ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು 1 ದೊಣ್ಣೆಯಿಂದ ಚಾಸಾ 1 ರವರ ಹಣೆಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆಗ ಅಲ್ಲೇ ಇದ್ದ 3 ಮತ್ತು 4 ನೇ ಆರೋಪಿತರು ಚಾಸಾ 1 ರವರನ್ನು ತಬ್ಬಿಡಿದುಕೊಂಡಿದ್ದು, 2 ನೇ ಆರೋಪಿ ಚಾಸಾ 1 ರವರ ಎಡ ಕೆನ್ನೆ ಮತ್ತು ಬಲ ತೊಡೆಗೆ ಕಚ್ಚಿ ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 2 ಮತ್ತು 3 ರವರು ಜಗಳ ಬಿಡಿಸಲು ಬಂದಾಗ 1 ನೇ ಆರೋಪಿ ತನ್ನ ಕೈಯಲ್ಲಿದ್ದ ನ್ಯಾಯಾಲಯದ ಮುಂದಿರುವ ದೊಣ್ಣೆಯಿಂದ ಚಾಸಾ 2 ರವರ ಎಡಗೈನ ಮುಂಗೈಗೆ ಹೊಡೆದು ತೀವ್ರ ಸ್ವರೂಪ ಗಾಯವನ್ನುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ಚಾಸಾ 3 ರವರ ಎಡಗೈ ಕಿರುಬೆರಳಿನ ಪಕ್ಕದ ಉಂಗುರದ ಬೆರಳಿಗೆ ಕಚ್ಚಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಆರೋಪಿ ಚಾಸಾ 3 ರವರನ್ನು ತಳ್ಳಿ ಕೆಳಕ್ಕೆ ಬೀಳಿಸಿದಾಗ ಚಾಸಾ 3 ರವರ ಸೊಂಟಕ್ಕೆ ನೋವಾಗಿರುತ್ತದೆ ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ 7 ರವರು ಗಲಾಟೆ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಆ ನಂತರ ಚಾಸಾ 1 ರಿಂದ 4 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿನಾಂಕ 11.08.2014 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ 3 ಎಂದು ಗುರುತಿಸಲಾಯಿತು.

5. ದೂರು ದಾಖಲಾದ ನಂತರ ದಿನಾಂಕ 11.08.2014 ರಂದು ಚಾಸಾ 4 ರವರು ಸ್ಥಳ ತೋರಿಸಿದ ಮೇರೆಗೆ ನನ್ನ ಹಾಗೂ ಚಾಸಾ 6 ರವರ ಸಮಕ್ಷಮ ಸಂಜೆ 05.30 ರಿಂದ 06.00 ರವರೆವಿಗೂ

ನಿಪಿ-2 ರಂತೆ ವಿವರವಾದ ಮಹಜರ್ ಕ್ರಮ ಜರುಗಿಸಿರುತ್ತಾರೆಂದರೆ ಸರಿಯಲ್ಲ. ನಿಪಿ-2 ಮಹಜರ್ ಸಮಯದಲ್ಲಿ ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು 1 ರ ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ನ್ನು ಓದಿ ನೋಡಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ.

6. ಆರೋಪಿತರು ಹಾಗೂ ನಾವುಗಳು ಒಂದೇ ಗ್ರಾಮಸ್ಥರಾದ ಕಾರಣ ಆರೋಪಿತರನ್ನು ಈ ಪ್ರಕರಣದಿಂದ ಬಿಡುಗಡೆಗೊಳಿಸುವ ಸಲುವಾಗಿ ಹಾಗೂ ಅವರಿಗೆ ಶಿಕ್ಷೆಯಾಗುವುದನ್ನು ತಪ್ಪಿಸುವ ಸಲುವಾಗಿ ಎಲ್ಲಾ ಗೊತ್ತಿದ್ದರು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**<u>ಪಾಟೀ ಸವಾಲು ಶ್ರೀ ವಕೀಲರಿಂದ ಆರೋಪಿ ಪರವಾಗಿಃ ಏನು ಇಲ್ಲಾ</u>**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**